Immovable Properties Belonging to Thirupathi Sri Amargiri Venkataramanaswamy

365. Sri H. S. SIDDAPPA (Arsikere) —

Will the Minister for Revenue be pleased to state :—

(*a*) the immovable properties held in the name of Thirupathi Sri Amargiri Venkataramanaswamy in Arasikere Taluk, Kasaba Hobli ;

(*b*) the properties leased out to private parties, the purpose and conditions of lease ;

(*c*) whether the lesse fulfilled the lease conditionse ; if not, why not ; the action proposed for fulfilment of the lease conditions ?

Sri N. HUTCHAMASTHY GOWDA (Minister for Reveue).—

(*a*) An extent of 109 Acres 18 guntas of land, one site and a house are endowed in the name of deity.

(*b*) The lands have been leased out to the private parties subject to the payment of Gutta amount fixed on them.

(*c*) The lessees have fulfilled the lease conditions. So the question of taking action does not arise.

ಶ್ರೀ ಎಚ್. ಎಸ್. ಸಿದ್ದಪ್ಪ.—ಉತ್ತರದಲ್ಲಿ ಒಂದು ಸೈಟು ಹಾಗೂ ಒಂದು ಮನೆ ಎಂದು ಇದೆ, ಇದರ ವಿವರಗಳೇನು ತಿಳಿಸುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ವಿವರಗಳು ಈಗ ನನ್ನಲ್ಲಿಲ್ಲ. ಆದರೆ ಇದರಲ್ಲಿ ಬರ ಬೇಕಾದ ಬಾಕಿಗಳು ಹಾಗೂ ಗೇಣಿ ಬಂದಿದೆ ಎಂದು ನನ್ನಲ್ಲಿರುವ ವರದಿಯಿಂದ ತಿಳಿದು ಬರುತ್ತವೆ; ಮಿಕ್ಕ ಇತರ ಎಲ್ಲ ವಿವರಗಳನ್ನು ಆ ಮೇಲೆ ತರಿಸಿ ಸಭೆಗೆ ಒದಗಿಸಿಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಇದರ ವಿವರಗಳನ್ನು ಕೊಡಲು ಈಗ ಇಲ್ಲ. ಆ ಮೇಲೆ ಕೊಡುತ್ತೇನೆ ಎಂದು ಹೇಳಿರುವಾಗ ಮಾನ್ಯ ಅಧ್ಯಕ್ಷರು ಇದನ್ನು ತಡೆಹಿಡಿಯಲ್ಪಟ್ಟ ಪ್ರಶ್ನೆಯಾಗಿ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರು ಹಾಗೆ ಅಪ್ಪಣೆ ಕೊಟ್ಟು ತಡೆಹಿಡಿಯಲ್ಪಟ್ಟ ಪ್ರಶ್ನೆಯಾಗಿ ಮಾಡಿದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ, ಮುಂದೆ ಇದರ ಎಲ್ಲ ವಿವರಗಳನ್ನು ಎಂದರೆ ಮನೆ ಹಾಗೂ ಸೈಟಿನ ಬಗ್ಗೆ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Expenditure incurred during the visit of Prime Minister

404. Sri KONANDUR LINGAPPA (Thirthahalli).—

Will the Chief Minister be pleased to state.—

(*a*) the expenditure incurred by the Government during the recent visit of the Prime Minister Smt. Indira Gandhi to Udipi and Mangalore ;

(*b*) the purpose of her visit to these places ?

Sri D. DEVARAJ URS (Chief Minister).—

(*a*) Rupees Three thousand, six hundred and fortynine and fifty-paise are incurred.

(*b*) She had come to inaugurate Dr. Baliga's Surgical Unit at Manipal. During the period she also visited Sri Krishna Temple at Udipi

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರದಲ್ಲಿ ರೂ. 3649—50 ಪೈಸೆ ಖರ್ಚಾಗಿದೆ ಎಂದು ತಿಳಿಸಿದ್ದಾರೆ. ಇಷ್ಟು ಕಡಿಮೆ ಖರ್ಚಾಗಿರುವುದರಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಗಿದೆ ತಿಳಿಸುತ್ತಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ಟ್ರಾನ್ಸ್‌ಪೋರ್ಟ್‌ಗಾಗಿ ಎರಡು ಸಾವಿರ ರೂಪಾಯಿಗಳು ಹಾಗೂ ಇನ್ನಿತರ ಬಾಬುಗಳ ಎಂದರೆ ಬೆಂಗಳೂರಿಂದ ಮೆಹಿಕರ್ಸ್‌ಗಳಿಗಾಗಿ 345 ರೂಪಾಯಿಗಳು, 290 ರೂಪಾಯಿಗಳು, 305 ರೂಪಾಯಿಗಳು ಮತ್ತು ಮಂಗಳೂರಿನಲ್ಲಿ ಸ್ಟಾಫ್‌ಗಾಗಿ 210 ರೂ. ಕೇಟರಿಂಗ್‌ಗಾಗಿ 25 ರೂಪಾಯಿಗಳು, ಹೀಗೆ ಇವೆಲ್ಲ ಒಟ್ಟು ಸೇರಿ ಮೂರುಸಾವಿರ ಚಿಲ್ಲರೆಯಾಗುತ್ತದೆ:

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರು ಜಿಲ್ಲೆಯಲ್ಲಿ ಅಷ್ಟೆಯ ಶಾಸಕರನ್ನೂ ಯಾರನು ಕರೆಯದೇ ಊಟ ಹಾಕಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಬೇರೆಯವರು ಊಟ ಹಾಕಿದಾಗ ಎಲ್ಲರನ್ನೂ ಕರೆಯಬೇಕು ಎಂದು ರೂಲು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪ್ರಧಾನ ಮಂತ್ರಿಗಳಿಗೆ ಊಟ ಹಾಕಿದಾಗ ಎಷ್ಟು ಜನ ಊಟಕ್ಕೆ ಸೇರಿದ್ದರು. ಅದರಲ್ಲಿ ಎಷ್ಟು ಜನ ರಾಜ್ಯ ಸರ್ಕಾರದವರು ಇದ್ದರು?

ಶ್ರೀ ಡಿ. ದೇವರಾಜ ಅರಸ್.—ಮಾಣ್‌ಪಾಲ್ ಇನ್ಸ್‌ಟ್ಯೂಟ್‌ನಲ್ಲಿ ಊಟ ಹಾಕಿದರು. ಎಷ್ಟು ಜನ ಸೇರಿದ್ದರು ಎನ್ನುವುದಕ್ಕೆ ಲೆಕ್ಕ ಇಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—3649 ರೂ. ಖರ್ಚಾಗಿದೆ ಎಂದು ತಿಳಿಸಿದ್ದೀರಿ. ಆದರಲ್ಲಿ ರಕ್ಷಣಾ ಇಲಾಖೆಯ ವಿಶೇಷ ಬಂದೋಬಸ್ತಿಗಾಗಿ ಎಷ್ಟು ಖರ್ಚಾಗಿದೆ.

ಶ್ರೀ ಡಿ. ದೇವರಾಜ ಅರಸ್.— ಎಲ್ಲಾ ಸೇರಿ ಮೂರು ಸಾವಿರ ಚಿಲ್ಲರೆ ಎಂದು ಹೇಳಿದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ. ಊಟ ಬೇರೆಯವರು ಹಾಕಿದರು, ಎಂದು ಹೇಳಿದಿರಿ. ಅದರಲ್ಲಿ ಇಷ್ಟು ಜನ ಎಂದು ಹೇಳಲಿಲ್ಲಾ. ಡಿಷಸ್ ಏನೇನು ಇತ್ತು ಎಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಬೆಳ್ಳುಳ್ಳಿ ಚೆಟ್ನಿ ಇದ್ದಹಾಗೆ ಇರಲಿಲ್ಲಾ.

ಶ್ರೀ ಕೋಣಂದೂರು ಲಿಂಗಪ್ಪ. ಪ್ರಧಾನ ಮಂತ್ರಿಗಳು ಉಡುಪಿಯ ದೇವರ ದರ್ಶನ ವಾಗುವಂತೆ ಮಾಡಿದಿರಿ. ಅಲ್ಲಿ ಅವರು ಪೂಜೆ ಗೀಜೆ ಏನಾದರೂ ಮಾಡಿದರೇ ?

ಶ್ರೀ ಡಿ. ದೇವರಾಜ್ ಅರಸ್:—ಮಂಗಳಾರತಿ ಪೂಜೆ ಅನ್ನುವುದಾದರೆ ಮಂಗಳಾರತಿ ಇದ್ದೇ ಇರುತ್ತದೆ.

Smuggling of foreign Goods in Shimoga District

509. Sri S. M. SHREERNALY CHANDRASEKHAR (Hosanagar).—

Will the Chief Minister be pleased to state:—

(*a*) whether the Government is aware that smuggling of foreign goods in Shimoga district is on the increase ;